# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 318/2022

| | | |
|---|---|---|
| ಹೆಸರು | : | ಅಶ್ವಿತ್ ಮೂಲ್ಯ |
| ತಂದೆಯ ಹೆಸರು | : | ನಾರಾಯಣ ಮೂಲ್ಯ |
| ಪ್ರಾಯ | : | 36 ವರ್ಷ |
| ಉದ್ಯೋಗ | : | ರಿಕ್ಷಾ ಚಾಲಕ |
| ವಾಸ | : | ಪಡಂಗಡಿ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 15.10.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಪಿ2 ಮತ್ತು 3 ಕ್ಕೆ ಸಹಿಗಳನ್ನು ದಿಃ 4.10.2021 ರಂದು ಸ್ಥಳದಲ್ಲಿ ಅಂದರೆ ಪಾದೆ ಎಂಬಲ್ಲಿ ಸಹಿ ಮಾಡಿರುತ್ತೇನೆ. ಸ್ಥಳಕ್ಕೆ ಪೊಲೀಸರು ಮಹಜರ್ ಗಾಗಿ ಬಂದಿದ್ದರು, ಆಗ ಸಹಿ ಮಾಡಿರುತ್ತೇನೆ. ಆಗ ಸ್ಥಳದಲ್ಲಿ ನಾನು ಸುರೇಶ್, ರಘುರಾಮ ಶೆಟ್ಟಿ ರವರು ಇದ್ದೆವು. 10.45 ರಿಂದ 11.00 ಗಂಟೆಯವರೆಗೆ ಪೊಲೀಸರು ಮಹಜರ್ ಮಾಡಿರುತ್ತಾರೆ. ನಿಪಿ2 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ.

<u>ಪಾಟೀ ಸವಾಲುಃ 1, 2, 4 ರಿಂದ 10 ನೇ ಆರೋಪಿತರ ಪರ ಶ್ರೀಮತಿ. ಎಸ್.ಎಲ್.ಎ ವಕೀಲರಿಂದಃ</u>

ನಿಮ್ಮನ್ನು ಆ ದಿನ ಸ್ಥಳಕ್ಕೆ ಯಾರು ಬರಲು ಹೇಳಿದ್ದರು ಎಂದರೆ ಸಾಕ್ಷಿ ಹತ್ತಿರದ ಮನೆ ಆದ ಕಾರಣ ನಾನೇ ಹೋಗಿದ್ದೇನೆ ಎಂದು ಹೇಳುತ್ತಾರೆ. ಸಾಧಾರಣ ಎಷ್ಟು ಗಂಟೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ 10.15 ಗಂಟೆಗೆ ಹೋಗಿದ್ದೇನೆ ಎಂದು ಹೇಳುತ್ತಾರೆ. ಆ ಜಾಗದಿಂದ ನಿಮ್ಮ ಮನೆಗೆ ಎಷ್ಟು ದೂರ ಎಂದರೆ ಅರ್ಧ ಕಿ.ಮೀ ದೂರ. ಚಾಸಾ1 ರವರ ಪರಿಚಯ ನನಗೆ ಇರುತ್ತದೆ, ಅವರು ನನ್ನ ಸ್ನೇಹಿತರು. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆಯಾ ಎಂದರೆ ಹೌದು. ಆರೋಪಿಯ ಜೊತೆ ಮಾತುಕತೆ ಇದೆಯಾ ಎಂದರೆ ಇಲ್ಲ. ಆ ದಿನ ಅಲ್ಲಿಗೆ ಹೋಗಲು ಕಾರಣ ಏನು ಎಂದರೆ ಸಾಕ್ಷಿ ನಾನು ಮತ್ತು ಚಾಸಾ1 ರವರು ರಿಕ್ಷಾವನ್ನು ಓಡಿಸುವುದರಿಂದ ನನ್ನ ಗಾಡಿ ಸರಿ ಇಲ್ಲ ಎಂದು ಅವರ ಗಾಡಿಯನ್ನು ತರಲು ಅಲ್ಲಿಗೆ ಹೋಗಿದ್ದೆ. ಆ ರೀತಿ ಗಾಡಿ ತರಲು ಹೋದಾಗ ಪೊಲೀಸರು ಬಂದಿರುತ್ತಾರೆ. ಆಗ ಸಮಯ 10.45 ಗಂಟೆ ಆಗಿತ್ತು. ಚಾಸಾ1 ರವರ ಮನೆ ಆ ಜಾಗದಿಂದ ಎಷ್ಟು ದೂರ ಎಂದರೆ ಸಾಕ್ಷಿ 60 ಅಡಿ ದೂರ ಎಂದು ಹೇಳುತ್ತಾರೆ. 10.15 ರಿಂದ 10.45 ಗಂಟೆಯವರೆಗೆ ಯಾರ ಕಾರಣಕ್ಕಾಗಿ ಅಲ್ಲಿ ಇದ್ದಿರಿ ಎಂದರೆ ಸಾಕ್ಷಿ ಚಾಸಾ1 ರವರು ಜಾಗದಲ್ಲಿ ಇರಲಿಲ್ಲ 10.45 ಗಂಟೆಗೆ ಬಂದಿದ್ದರು, ಆದ ಕಾರಣ ಅಲ್ಲೆ ಇದ್ದೆ ಎಂದು ಹೇಳುತ್ತಾರೆ. ಪೊಲೀಸರು ಎಷ್ಟು ಜನ ಇದ್ದರು ಎಂದರೆ 3 – 4 ಜನ ಇದ್ದರು. ಏನು ಮಾಡಿದ್ದಾರೆ ಎಂದರೆ ಸಾಕ್ಷಿ ಜಾಗದಲ್ಲಿ ಬೇಲಿ ಕಂಬ ಮಗುಚಿತ್ತು, ಅದನ್ನು ತೋರಿಸುತ್ತಿದ್ದರು. ಮಗುಚಿದ್ದ ಬಗ್ಗೆ ನೀವು ಸಾಕ್ಷ್ಯ ಹೇಳುತ್ತೀರಾ ಎಂದು ಕೇಳಿದ್ದರು, ಅದಕ್ಕೆ ನಾವು ಒಪ್ಪಿದ್ದೆವು. ಮಗುಚಿ ಬಿದ್ದ ಕಂಬ ಯಾವ ತರಹದ್ದು ಎಂದರೆ ಸಿಮೆಂಟ್ ಕಂಬ. ಎಷ್ಟು ಕಂಬ ಇತ್ತು ಎಂದರೆ ಸಾಕ್ಷಿ 6 ಕಂಬ ಮಗುಚಿ ಬಿದ್ದಿತ್ತು ಎಂದು ಹೇಳುತ್ತಾರೆ. ಕಂಬ ಬಿದ್ದದ್ದಕ್ಕೆ ಸಾಕ್ಷ್ಯ ಹೇಳುತ್ತೇವೆ ಎಂದು ನಮ್ಮ ಸಹಿ ಪಡೆದಿದ್ದಾರೆ. ಸ್ಥಳದಿಂದ ನೀವು ಮೊದಲು ಹೋಗಿದ್ದೀರಾ, ಪೊಲೀಸರು ಮೊದಲು ಹೋಗಿದ್ದಾರಾ ಎಂದರೆ ಸಾಕ್ಷಿ ಪೊಲೀಸರು ಹೋದ ನಂತರ ಹೋಗಿದ್ದೇವೆ ಎಂದು ಹೇಳುತ್ತಾರೆ. ಪೊಲೀಸರು ಬಂದಾಗ ತುಂಬಾ ಜನ ಬೇರೆಯವರು ಬಂದಿದ್ದರಾ ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ಹೇಳುತ್ತಾರೆ, ಆರೋಪಿ ಮತ್ತು ಚಾಸಾ1 ರವರ ಮನೆಯವರು ಮಾತ್ರ ಇದ್ದರು.

2. ಆ ಸ್ಥಳ ಯಾರದ್ದು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಚಾಸಾ1 ರವರಿಗೆ ಸೇರಿದ್ದು ಎಂದು ಹೇಳುತ್ತಾರೆ. ಸರ್ವೇ ನಂಬರ್ ಗೊತ್ತಾ ಎಂದರೆ ಇಲ್ಲ. ತಂತಿ ಮತ್ತು ಕಂಬವನ್ನು ಬಿಟ್ಟು ಬೇರೆ ಏನು ನೋಡಿರುವುದಿಲ್ಲ. ಸಾಧಾರಣ ಎಷ್ಟು ವಿಸ್ತೀರ್ಣ ಸ್ಥಳ ಎಂದು ಹೇಳಬಹುದಾ ಎಂದರೆ ಇಲ್ಲ.

ಯಾವ ಉದ್ದೇಶಕ್ಕೆ ಕಂಬ ಬಿದ್ದಿದೆ ಎಂದು ನನಗೆ ಗೊತ್ತಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ, ಅಲ್ಲದೆ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ1 ರವರು ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)